**<u>ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ ನ್ಯಾಯಾಲಯ</u>**

**<u>ಹಿರೇಕೆರೂರು</u>**

**<u>ಎಂ.ವಿ.ಸಿ ನಂ: 923/2021</u>**

ಆರ್.ಡಬ್ಲ್ಯೂ-1

| | | |
|---|---|---|
| ಹೆಸರು | : | ಸುನೀತಾ ಪಿ. ಬಿ. |
| ತಂದೆ ಹೆಸರು | : | ಡಾ. ಬಂಗಾರಪ್ಪ ಪಿ. |
| ವಯಸ್ಸು | : | 30 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ |
| ವಾಸ ಸ್ಥಳ | : | ಶಿವಮೊಗ್ಗ |

**<u>ಇಂದು ದಿನಾಂಕಃ 20-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಪಿ. ಎಸ್. ಎಚ್. ವಕೀಲರಿಂದ ಃ -</u>**

ದಿಃ 04-01-2021 ರಂದು ಅರ್ಜಿದಾರಳು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದಳು. ಸದರಿ ವಿಷಯವನ್ನು ಪೋಲಿಸರಿಗೆ ತಿಳಿಸಿರುತ್ತೇವೆ. ಸದರಿ ಮಾಹಿತಿ ಕಳುಹಿಸಿರುವ ನಂಬರ ನೆನಪಿರುವುದಿಲ್ಲ. ರಸ್ತೆಯ ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ದಿಃ18-01-2021 ರಂದು ಪಿರ್ಯಾದಿಯನ್ನು ಕೊಟ್ಟಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಎಂ. ಎಲ್. ಸಿ. ಎಕ್ಷಟ್ರ್ಯಾಕ್ಟನ ನಕಲು ಮತ್ತು 1 ವೈದ್ಯಕೀಯ ಬಿಲ್ಲನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಆರ್ -1 ಹಾಗೂ 2 ಎಂದು ಗುರುತಿಸಲಾಯಿತು. ಅರ್ಜಿದಾರಳ ಹೆಸರನ್ನು ಆ ದಿನ ಕ್ರಮ ಸಂಖ್ಯೆ -1 ರಲ್ಲಿ ನಮೂದು ಮಾಡಿರುತ್ತದೆ. ಅದರ ಹಿಂದಿನ ದಿನಾಂಕದ ದಾಖಲೆಯನ್ನು ತರದ ಕಾರಣ ಅದರ ಹಿಂದಿನ ರೋಗಿಯ ಕ್ರಮ ಸಂಖ್ಯೆ ಎಷ್ಟು ಇತ್ತು ಎಂದು ಹೇಳಲು ಆಗುವುದಿಲ್ಲ. ನಿಆರ್-1 ರಲ್ಲಿರುವ ಕ್ರಮ ಸಂಖ್ಯೆಯು ಎಂ. ಎಲ್ ಸಿ ರಜಿಸ್ಟರನಲ್ಲಿ ಇರುವ ಸಂಖ್ಯೆ ಇರುತ್ತದೆ.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ. ಜಿ. ಎಂ. ವಕೀಲರಿಂದ</u>**

ನಿಆರ್ -2 ಅರ್ಜಿದಾರಳಿಗೆ ಸಂಬಂಧಪಟ್ಟದ್ದು. ಅರ್ಜಿದಾರಳು ನಮ್ಮ ಆಸ್ಪತ್ರೆಯಲ್ಲಿ ಅದೇ ದಿನ ಚಿಕಿತ್ಸೆಯನ್ನು ಪಡೆದುಕೊಂಡು ಹೋಗಿರುತ್ತಾಳೆ.

**<u>ಮರು ವಿಚಾರಣೆಃ ಇಲ್ಲಾ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 20-01-2024

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು